ಶ್ರೀ

ಶ್ರೀ ಮಚ್ಛರಣ್ಯವಿಠಲೋ ವಿಜಯತೇ

# ಶ್ರೀ ಪ್ರದ್ಯುಮ್ನತೀರ್ಥ ಶ್ರೀಪಾದಂಗಳವರು



ಶರಣ್ಯ ವಿಠಲಾಸಕ್ತಂ ಪ್ರಜ್ಞಾಪೀಠಸ್ಯ ಸ್ಥಾಪಕಂ |
ಪ್ರಮಾಣಜ್ಞಂ ಪ್ರಮೇಯಜ್ಞಂ ಪ್ರದ್ಯುಮ್ನಾಖ್ಯ ಗುರುಂ ಭಜೇ ||

## ಕಿರು ಪರಿಚಯ

ಮೈಸೂರು ನಗರಕ್ಕೆ ಸುಮಾರು ಹದಿನೈದು ಮೈಲು ದೂರದಲ್ಲಿರುವ ಸಾಗರಕಟ್ಟೆಯಲ್ಲಿ ಶ್ರೀಪ್ರದ್ಯುಮ್ನತೀರ್ಥ ಶ್ರೀಪಾದಂಗಳವರ ಮಹಾಪ್ರಯತ್ನದಿಂದ ಸಾಗರಕಟ್ಟೆ ಮಠವು ಸ್ಥಾಪಿತವಾಗಿರುವದು. ಮಹಾವೈರಾಗ್ಯಶಾಲಿಗಳು ಹಾಗೂ ಅನೇಕ ಮಹಾತ್ಮೆವುಳ್ಳವರಾಗಿರುವರು
ಈ ಮಹಾನುಭಾವರು.

ಸಾಗರಕಟ್ಟೆ, ಪಾವನವಾದ ಕಾವೇರಿ ಪರಿಸರದಲ್ಲಿರುವ ರಮಣೀಯ ಸ್ಥಾನ. ಈ ಸ್ಥಳವು ಗೋಪಾಲಕೃಷ್ಣಸ್ವಾಮಿ, ಶ್ರೀ ಪ್ರಾಣದೇವರು, ಶ್ರೀ ಚಂದ್ರಮೌಳೀಶ್ವರ ದೇವರ ಸಾನಿಧ್ಯದಿಂದ ಪಾವನಕ್ಷೇತ್ರವಾಗಿದೆ. ಶ್ರೀಪ್ರದ್ಯುಮ್ನತೀರ್ಥರ ತಪೋಭೂಮಿಯಾದ್ದರಿಂದ ಇಲ್ಲಿ ಒಂದು ಹೆಚ್ಚಿನ ಆಧ್ಯಾತ್ಮಿಕ ವಾತಾವರಣ ಉಂಟಾಗಿದೆ.

ಶ್ರೀಪ್ರದ್ಯುಮ್ನತೀರ್ಥರು ಬಹುಕಾಲ ತಪಶ್ಚರ್ಯಮಾಡಿ ದಿವ್ಯವಿಭೂತಿಪುರುಷರಾಗಿದ್ದಾರೆ. ಸಾಗರಕಟ್ಟೆ ಸ್ವಾಮಿಗಳೆಂದೇ ಪ್ರಸಿದ್ಧರಾದ ಶ್ರೀಗಳವರು ಮಾಧ್ವರ ಇತ್ತೀಚಿನ ಆಧ್ಯಾತ್ಮರಂಗದ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಶ್ರೀಗಳವರು ತಮ್ಮ ತಪ್ಪಸ್ಸು, ವೈರಾಗ್ಯ, ಪಾಂಡಿತ್ಯ, ಪ್ರಮೇಯಜ್ಞತೆಗಳಿಂದ ಅನೇಕ ಮಹಾಮೇಧಾವಿಗಳಿಗೆ ಮಾಧ್ವತತ್ವಜ್ಞಾನದ ಮಹಾದ್ವಾರವನ್ನು ತೋರಿ ಉದ್ಧಾರದ ರೀತಿ ಹೇಳಿದ್ದಾರೆ.

ಶ್ರೀಪ್ರದ್ಯುಮ್ನತೀರ್ಥರು ಪೂರ್ವಾಶ್ರಮದಲ್ಲಿ ಧಾರವಾಡ ಜಿಲ್ಲೆಯಲ್ಲಿ ೧೮೯೦ನೆಯ ಇಸ್ವಿಯಲ್ಲಿ ಜನಿಸಿದರು. ತಂದೆ ಶ್ರೀವೆಂಕಟರಮಣಾಚಾರ್ಯರು. ಅವರೂ ಸಾತ್ವಿಕರು, ವೈರಾಗ್ಯಶಾಲಿಗಳು. ಅವರೂ ಕೊನೆಗೆ ಸನ್ಯಾಸಾಶ್ರಮ ಕೈಕೊಂಡಿದ್ದರು. ಶ್ರೀಪ್ರದ್ಯುಮ್ನತೀರ್ಥರಿಗೆ ವೈರಾಗ್ಯ ರಕ್ತಗತವಾಗಿಯೇ ಬಂದಿದೆ. ಇವರು ಮುಳುಬಾಗಿಲು ಶ್ರೀ ಶ್ರೀಪಾದರಾಜಮಠಾಧೀಶರಾಗಿದ್ದ ಶ್ರೀಮೇಧಾನಿಧಿತೀರ್ಥ ಶ್ರೀಪಾದಂಗಳವರಲ್ಲಿ ವೇದಾಂತ ಅಧ್ಯಯನ ಮಾಡಿದರು, ವಿವಾಹವೂ ಆಗಿತ್ತು. ಸಂಸಾರದಲ್ಲಿ ಅನಾಸಕ್ತರಾಗಿ ವೈರಾಗ್ಯಹೊಂದಿ ಮಂತ್ರಾಲಯಕ್ಕೆ ಸೇವೆಗೆ ಹೋದರು. ಶ್ರೀರಾಯರಿಂದ ಆಜ್ಞಪ್ತರಾಗಿ ಕುಂದಾಪುರ ವ್ಯಾಸರಾಯಮಠದ ಪೀಠಾಧಿಪತಿಗಳಾಗಿದ್ದ ಶ್ರೀಲಕ್ಷ್ಮೀಪ್ರಿಯತೀರ್ಥ ಶ್ರೀಪಾದಂಗಳವರಿಂದ ಆಶ್ರಮ ಸ್ವೀಕರಿಸಿದರು. 'ಪ್ರಜ್ಞಾಪೀಠ' ವನ್ನು ಸ್ಥಾಪಿಸಿದರು. ೧೯೨೦ರಲ್ಲಿ ಕಾವೇರಿ ತೀರದ ಸಾಗರಕಟ್ಟೆಯಲ್ಲಿ ಚಾತುರ್ಮಾಸ್ಯಕ್ಕೆ ಕುಳಿತರು. ಮುಂದೆ ಬಹುಕಾಲ ಅಲ್ಲಿಯೇ ನೆಲಸಿದರು. ಅನೇಕರು ಇವರ ಮಾಹಿಮಾತಿಶಯದಿಂದ ಪ್ರಭಾವಿತರಾಗಿ ಮಠಕಟ್ಟಿಸಿಕೊಟ್ಟರು. ಶ್ರೀಗಳವರು ದೇವಸ್ಥಾನಗಳನ್ನು ಕಟ್ಟಿಸಿದ್ದಾರೆ. ಸಾಗರಕಟ್ಟೆ ದಿವ್ಯ ಆಧ್ಯಾತ್ಮ ಕೇಂದ್ರವಾಗಿದೆ. ಶ್ರೀಜಯಸಿಂಹಾಚಾರ್ಯರು (ಹಿಂದಿನ ಕುಂದಾಪುರವ್ಯಾಸರಾಜಮಠದ ಶ್ರೀಗಳು), ಎಚ್.ಸುಬ್ಬರಾಯರು, ಶ್ರೀ ದೇಶಿಕಾಚಾರ್ಯರು ಮೊದಲಾದ ಅನೇಕ ವಿದ್ವಾಂಸರಿಗೆ ಇವರು ಮಧ್ವಸಿದ್ಧಾಂತ ಪ್ರಾಥಮಿಕ ಪಾಠಗಳನ್ನು ಹೇಳಿದ್ದಾರೆ. ದಾರ್ಶನಿಕ ದಿಗ್ದರ್ಶನ ಧುರೀಣರಾಗಿ, ಸನ್ಮಾರ್ಗ ದರ್ಶನ ಪ್ರವರ್ತಕರಾಗಿ ಶ್ರೀಮದಾಚಾರ್ಯರ ಸೇವೆಯನ್ನು ಸಲ್ಲಿಸಿದ ಧೀಮಂತರು.

ರಾಕ್ಷಸನಾಮ ಸಂವತ್ಸರ (೧೯೭೫)ನೇ ಜೇಷ್ಠ ಕೃಷ್ಣ ಅಮಾವಾಸ್ಯೆಯ ದಿನ ಹರಿಪುರಕೆ ತೆರಳಿದರು ಈ ಹರಿದಾಸರು.

ಈಗಲೂ ಮೈಸೂರು ಕ್ಷೇತ್ರದಲ್ಲಿ ಬೃಂದಾವನದಲ್ಲಿ ನಿಂದು ನರಹರಿಪ್ರಿಯರಾದ ಸಾಗರಕಟ್ಟೆ ಪ್ರಭುಗಳು ತಮ್ಮ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ.

ಸಂಪಾದನೆ : ಡಾ. ರಂಗನಾಥ್ ಭಾರದ್ವಾಜ್
ಕೆ. ಹೆಚ್. ಎಸ್. ಆರ್. ಸಿ.
(ಕರ್ನಾಟಕ ಹರಿದಾಸ ಸೈಂಟಿಫಿಕ್ ರಿಸರ್ಚ್ ಸೆಂಟರ್.)

## ॥ ಶ್ರೀ ಶರಣ್ಯವಿಟ್ಠಲೋ ವಿಜಯತೇ ॥
## ಸಾಗರಕಟ್ಟೆಮಠದ ಯತಿವರೇಣ್ಯರಾದ
## ಶ್ರೀ ಪ್ರದ್ಯುಮ್ನತೀರ್ಥ ಶ್ರೀಪಾದಂಗಳವರಿಂದ ವಿರಚಿತ
## ದೇವರನಾಮಗಳು.

### ೧. ಗುರುವೃಂದವಂದನೆ.

ಪ್ರೇಮದಿಂದೊಂದಿಸುವೆ । ಗುರುವೃಂದಕೇ ॥
ಕಾಮಧೇನುವಿನಂತೆ । ಕೊಡಲೆಮಗಭೀಷ್ಟವನು ॥ ಪ ॥

ಸತಿಯಬೇಡುವನಲ್ಲ । ಸುತರಬೇಡುವನಲ್ಲ ।
ಅತಿಶಯದಭಾಗ್ಯವನು ಕೇಳ್ವನಲ್ಲ ।
ರತಿಪತೀ ಆಟವನು । ಖಂಡಿಸೀಬೇಗದಲಿ ।
ಮತಿತಪ್ಪಲೆನಗೆ ದುರ್ವಿಷಯದೊಳಗೆಂದು ॥ ೧ ॥

ಶಕ್ತಿಬೇಡುವನಲ್ಲ । ಯುಕ್ತಿಬೇಡುವನಲ್ಲ ।
ಭುಕ್ತಿ ಎನಗಿಲ್ಲೆಂದು ಕೇಳ್ವನಲ್ಲ ॥
ಮುಕ್ತಿದಾಯಕನಮ್ಮ । ವಿಟ್ಠಲನ ಚರಣದಲಿ ।
ಭಕ್ತಿದೃಢವಾಗೆನಗಿತ್ತುರಕ್ಷಿಸಲೆಂದು ॥ ೨ ॥

ಮಾನಬೇಡುವನಲ್ಲ । ದಾನಬೇಡುವನಲ್ಲ ॥
ಮಾನನಿಧೀಶ ನಮ್ಮ ಶ್ರೀ। ನರಹರಿಚರಣವನು ।
ಕಾಣಿಸುವ ಜ್ಞಾನವನು । ದಾನಮಾಡಲಿ ಎಂದು ॥ ೩ ॥

## ೨. ಶ್ರೀಸತ್ಯಜ್ಞಾನತೀರ್ಥರು.

ನಿರುತದಿಂದಿಳೆಯೊಳು । ಅರಸೀ ನೋಡಲುಕಾಣೆ ।
ಗುರುಸತ್ಯಜ್ಞಾನರಿಗೆ ॥ ಪ ॥
ಸರಿ ಇಲ್ಲಿವರ ಚರಣಾಕಮಲವ । ನಿತ್ಯ ।
ಆರಾಧಿಪರ ದುರಿತ ಹರಿಪರಾ ॥ ಅ . ಪ ॥

ಸತ್ಯಜ್ಞಾನಗುರೋ ನೀ । ಗತಿ ಎಂದವರ ।
ನಿತ್ಯದೀಬಿಡದೇ । ಕಾಯ್ವ ।
ಅತ್ಯಾದರದಿ ಮಧ್ವಮತ ಸ್ಥಾಪಕರಾಗಿ ।
ಮಿಥ್ಯಾಜ್ಞಾನಗಳಳಿದಾ। ಮೆರೆದಾ ॥ ೧ ॥

ಸತ್ಯಧೀರರಿಂದ ಯತ್ಯಾಶ್ರಮ ಪಡೆದು ।
ರತ್ಯಾದಿ ವಿಷಯವ ಬಿಟ್ಟು ॥
ಯತ್ಯಾಶ್ರಮೋಕ್ತ ಕೋಪಾತ್ಯಾಗಾದಿಗಳನು
ವ್ಯತ್ಯಾಸಿಲ್ಲದೇನಡೆಸೀ । ಶೋಭೀಸೀ ॥ ೨ ॥

ಗುರುಆರಾಧನಿ ದಿನ ತೀರ್ಥವ ಕೊಡುತಿರೆ ।
ವರ ಸುವಾಸಿನಿ ಒಬ್ಬಳೂ ।
ಕರವನೀಡಲು ಬಂದು ಅರಿತು ವಿಧವತ್ವವ ।
ನೆರೆಪೇಳ್ದರಪರೋಕ್ಷದೀ । ಭೂತಳದೀ ॥ ೩ ॥

ಮರುದಿನ ಆರೋಗಣೆಯ ಸಮಯದಿ । ಮಳೆ ।
ಭರದಿಂದ ಸುರಿಯುತ್ತಿರೆ ।
ಮೊರೆಯಿಡೆ ಎಡಬಲದವರು ಅದನು ಕೇಳೆ ।
ದೂರಸ್ಥಳಿಹಳೆಂದ್ಹೇಳಿರು । ಪಂಕ್ತಿಯಲಿ ॥ ೪ ॥

ಈ ರೀತಿಯಿಂದಲಿ ತೋರೀಸಿ ಮಹಿಮೆಯ ।
ಇರಿಸೆ ಮಂತ್ರಿಸಿ ಫಲವ।
ಭರದಿ ಸುರಿಯುವ ಮಳೆ ತ್ವರಿತದಿ ನಿಲ್ಲಲು ।
ಅರಿತು ವಿಚಾರಿಸಲೂ । ನಿಜವಿರಲು ॥ ೫ ॥

ನಿವೃತ್ತಿ ಸಂಗಮದಿ ಅವನಿಜೆಪತಿಪೂಜೆ ।
ಸಾವಧಾನದಿ ಮಾಡಲೂ ।
ಇವರ ಮನೋಧಾರಡ್ಯ ಜವದಿ ಜಯಾಮುನಿ ।
ಅವನೀಗರುಹಬೇಕೆಂದೂ । ತಾ ಬಂದೂ ॥ ೬ ॥

ಬರುತೀರೆ ಉರಗಾಕಾರದಿಂದಲಿ ಬಂದು ।
ಅರಿಯದ ಜನರು ಕೂಗೆ ।
ಮಾರಮಣನ ಧ್ಯಾನ ಜರಿಯದೆ ಅವರಿಗೆ ।
ತೋರಿದರಭಯವನೂ । ವಿಚಿತ್ರವನೂ ॥ ೭ ॥

ಭೂವೈಕುಂಠದಿ ವಿಶ್ವ । ರೂಪದರ್ಶನಕ್ಪೋಗೆ ।
ಮಾರ್ಗವ ಕೊಡದಿರಲೂ ।
ಭಾವದಿ ಧ್ಯಾನಿಸೆ ಶ್ರೀವಲ್ಲಭ ನಾಮ ।
ದರಿಸದೀರಾಧರಿಸೇಧರಿಸಿದ ॥ ೮ ॥

ಈ ವಿಧ ಮಹಿಮೆಯತೋರಿಸಿ ಜಗದೊಳು ।
ಗೋದಾತೀರದಿ ಶೋಭಿಪಾ ।
ಅವನಿಪ ಮಹೇಂದ್ರ । ಭುವನನ ಶ್ರೀ ನರ ।
ಹರಿ ನಿನ್ನಮಾಘಸಿತದಿ ಸ್ಮರಿಸಿದ ॥ ೯ ॥

## ೩.ಶ್ರೀಸತ್ಯಜ್ಞಾನತೀರ್ಥರು.

ಸ್ಮರಿಸು ಸ್ಮರಿಸು ಮನವೇ ಗುರುರಾಯರ ॥ ಪ ॥
ಸ್ಮರಿಸು ಸ್ಮರಿಸು ಬಿಡದೆ ಸ್ಮರಿಸು ನೀ ಗುರು ಸತ್ಯ ।
ಜ್ಞಾನತೀರ್ಥರ ಪದವಾ ಸಾರುವೇ ।
ಬೇಡಿದ್ದು ಕೊಡುವನೆಂಬುವರನ್ನು ॥ ಅ. ಪ ॥

ಸಂಶಯ ಪಡಬ್ಯಾಡವ್ಪೋ । ಇದಕೆ ನಾ ನಿ ।
ಸ್ಸಂಶಯದಿಂ ಪೇಳುವೆ ।
ಸಂಶಯಾತಕೆ ಋಷಿ ವಂಶೀಕ ರಾವಣನ ।
ಧ್ವಂಸಮಾಡಿದ ರಾಮನ । ಸಂಸೇವಿಪರರ । ನೀ ॥ ೧ ॥

ಶಾಪಾನುಗ್ರಹ ಶಕ್ತರೂ । ಇವರು ಕಾಮಕೋಧವ ಬಿಟ್ಟವರೂ ।
ತಾಪತ್ರಯಗಳಳಿದು ಪಾಪಗಳೋಡಿಸಿ ।
ಕಾಪಾಡುವೆನೆಂದು ಜಗದಿ ಮೆರೆದವರ ॥ ೨ ॥

ಗುರುಕುರುಣಾಬಲದೀ ಶ್ರೀಹರಿನಪರೋಕ್ಷೀ । ಗೈಸಿದ ।
ಧೀರರ ದುರ್ವಾದಿಗಳ ಮುರಿದು । ಗುರುಮಧ್ವರಾಯರ
ಪರಮ ಪ್ರೀತಿಯ ಪಡೆದ ನರಹರಿ ಪ್ರೀಯರ ॥ ೩ ॥

## ೪.ಶ್ರೀಸತ್ಯಜ್ಞಾನತೀರ್ಥರ ಮಂಗಳ ಪದ

ಮಂಗಳಂ ಜಯ ಮಂಗಳಂ ॥ ಪ ॥

ಪರಮಾಸನದಲಿಕುಳಿತವಗೆ । ಪರತತ್ವವ ತಾ ತಿಳಿದವಗೆ ।
ಕರುಣದಿಂದ ದುರಿತವಳಿಗಳನೂ ।
ಸ್ಮರಿಸಿದ ಮಾತ್ರದಿ ಪರಿಹರಿಸುವಗೇ ॥ ೧ ॥

ಪೊಡವೀಯಲಿ ಶೋಭಿಸುವವಗೆ । ಕಡಲಶಯನನ ಭಕ್ತನಿಗೆ ।
ಅಡಿಗಳ ಬಿಡದೇ ಭಜಿಪ ಸುಜನರಿಗೆಲ್ಲ ।
ಕಡುತರಜ್ಞಾನವ ನೀಡುವಗೇ ॥ ೨ ॥

ಸತ್ಯಧೀರರಕುವರನಿಗೆ । ಸತ್ಯಜ್ಞಾನ ನೆಂದೆನಿಸುವಗೆ ।
ಅತ್ಯಾದರದಿಂ ರಾಮನ ಧ್ಯಾನಿಸಿ ।
ಪ್ರತ್ಯಕ್ಷವ ಕರೆಸುವವಗೆ ॥ ೩ ॥

ಕಾಮಕ್ರೋಧವ ಬಿಟ್ಟವಗೆ । ಪ್ರೇಮ ಆಶೆಗಳ ಸುಟ್ಟವಗೆ ।
ಧೂಮಕೇತು ಸುಖ ಸೂನುವಾಹನನ ।
ನೇಮದಿಂದ ಆರಾಧಿಪಗೇ ॥ ೪ ॥

ದಂಡಕಮಂಡಲ ಪಿಡಿದವಗೆ । ಪಂಡಿತರಿಂದಲಿ ಪೂಜಿತಗೆ ।
ಕೊಂಡಾಡಿದರ್ಯಮ ದಂಡನೆ ತಪ್ಪಿಸಿ ।
ಶೊಂಡನಾದ ನರಹರಿ ತೋರ್ಪಗೆ ॥ ೫ ॥

## ೫.ಅಬ್ಬೂರು ಶ್ರೀಲಕ್ಷ್ಮೀಪ್ರಿಯತೀರ್ಥರು.

ಲಕ್ಷ್ಮಿಪ್ರಿಯರ । ಚರಣ । ಭಜನೆ
ನಿರುತದಿಂದ ಮಾಡುವಾ ॥ ಪ ॥
ಲಕ್ಷ್ಮೀಪತಿಯ ಕರುಣ ಪಡೆದು ।
ಹರುಷದೀ ನಾವ್ ಬದುಕುವಾ ॥ ಅ. ಪ ॥

ಸದ್ವೈಷ್ಣವ ಕುಮುದಕಾಭಿ । ವೃದ್ಧಿತರುವಗೋಸುಗಾ ।
ಮಧ್ವಮತಾಬ್ಧಿಯಲ್ಲಿ । ಉದ್ಭವಿಸಿದ ಚಂದ್ರರ ॥ ೧ ॥

ವ್ಯಾಸಮುನಿಗೆ ಒಲಿದ ಕೃಷ್ಣನ । ಸೋಸಿನಿಂದ ಪೂಜಿಸೀ ।
ವ್ಯಾಸಸೂತ್ರ ಭಾಷ್ಯಉಪ– । ನ್ಯಾಸ ಮಾಡಿ ಮೆರೆವರಾ ॥ ೨ ॥

ದೀನಜನರ ವೃಂದಕೇ ಸುರ – । ಧೇನುಎನಿಪ ।
ಮುನಿವರಾ ಶ್ರೀನರಹರಿಗೆ ತಾವು । ಅನುಗರಾಗಿ ಇರುವರಾ ॥ ೩ ॥

## ೬.ಶ್ರೀಸತ್ಯಧರ್ಮತೀರ್ಥರು

ಸತ್ಯಧರ್ಮ ಸದ್ಗುರುವರ ರಕ್ಷಿಸು ॥
ಭೃತ್ಯನೀನಾಗೆಂದು । ಕೃತ್ಯವಿಪರ್ಯಯ
ವೆತ್ತೆಣಿಸದೆ ಕೃತ । ಕೃತ್ಯನ ಮಾಡಿಂದೂ ॥ ಪ ॥

ಸತ್ಯವರರ ವರ ಕುವರನೆ  ನೀನತ್ಯುತ್ತಮ ಸುಖ ಚಿನ್ನಾ ।
ಯತ್ಯಾಶ್ರಮ ಸದ್ಧರ್ಮಾಚರಣದಿ ನಿತ್ಯಾರ್ಚಿತ ರಾಮಾ ।
ಭೃತ್ಯಜನಕೆ ಸದ್ಬುದ್ಧಿ ಬೋಧಿಸಿ ಕೃತಕೃತ್ಯರ ಮಾಡುತಲೀ ।
ಕೃತ್ಯದಿಂದ ಗುರುವಿತ್ತ ಸುನಾಮ ಯಥಾರ್ಥಪಡಿಸಿ
ಕ್ಷಿತಿಗುತ್ತಮನೆನಿಸಿದ ॥ ೧ ॥

ಭದ್ರಾತೀರನೆ ಇತ್ತು ಸುಭದ್ರಗಳ್‌ನಿದ್ರಾರಹಿತರಿಗೆ ।
ಆದ್ರಾಂತಃಕರುಣನೆ ಸೌಹಾರ್ದದಿ ಭದ್ರಾರಮಣನಲೀ ।
ಕಾರ್ದ್ರವೇಯ ಭೂಷಣನಂದದಿ ನೀಭದ್ರಾದೇವಿಯನೂ ।
ಛಿದ್ರರಹಿತ ಶಿಲೆ ಮಧ್ಯದಿ ಪಡೆದು ಸುಭದ್ರಾಪತಿ ಸುಖ
ಮುದ್ರಾಧರನೇ ॥ ೨ ॥

ಶ್ರೀನರಹರಿ ಪದ ನೀನನುದಿನದಲಿ ಧ್ಯಾನಮಾಡುತ ಬಾಹ್ಯ ।
ಜ್ಞಾನವಿಲ್ಲದೆ ಅನುಮಾನ ವಿಪರ್ಯಯ ಹೀನಗೈಸಿ ಸಾಕ್ಷಿ ।
ಮಾನದಿಂದ ಕೋಟ್ಯಾರ್ಭದ ರವಿಪ್ರಭೆ ಕಾಣುತ ಪ್ರತಿಮುಖವೋಲ್ ।
ಏನುಣದಕೆ ಅನುಮಾನವಿಲ್ಲ ಹಂ ಮನಿಯುವನೆನ್ನುವೆ ನೀ
ಸರಿಲಿಂಗರೂಪಧರ ॥ ೩ ॥

### ೭.ಶ್ರೀ ವಾದೀಂದ್ರ ತೀರ್ಥರು.

ವಾದೀಂದ್ರ ಗುರುರಾಜಾ । ನಿನ್ನ ।
ಪಾದವತೋರಿಸಯ್ಯಾ ॥
ವಾದೀಂದ್ರಗುರುನಿನ್ನ । ಪಾದವನಂಬಿದೇ
ಮೋದವಕೊಡುವುದು । ಮದಗಳೋಡಿಸಿ ॥ ಪ ॥

ಉಪೇಂದ್ರ ಕರಕಮಲ ಜಾತ । ಪಾಪಗಳೋಡೀಸಯ್ಯ ।
ಪಾಪರಾಶಿಯ ಸುಟ್ಟು । ದ್ರೌಪದೀವರದನ ।
ಕೃಪೆಯಾಗುವಂತೆ ಮಾಡೋ । ಶ್ರೀಪತಿಪ್ರೀಯನೇ ॥ ೧ ॥

ಮೂಲರಾಮರಪಾದ ಪದುಮದಿ । ಅಳಿಯಂತಿಪ್ಪಧೀರ ।
ಶೀಲಾದಿಗುಣವಿತ್ತು । ಶ್ರೀಲೋಲನಂಘ್ರಿಯ ।
ಮಲಿನಮನವ ಕಳದು । ಪೊಳೆಯುವಂತೆ ಮಾಡೋ ॥ ೨ ॥

ತುಂಗಾತೀರದೊಳಿದ್ದು । ನಿತ್ಯ ಭಂಗಗಳೋಡಿಸುವಿ ।
ಶೃಂಗಾರತುಳಸೀಯ । ಮಂಗಳ್ಹಾರವ ಧರಿಸಿ ।
ತುಂಗಮಹಿಮ ನರ । ಸಿಂಗ ಮೂರುತಿ ತೋರೊ ॥ ೩ ॥

### ೮.ರಾಘವೇಂದ್ರತೀರ್ಥರು.

ನಾನೇನು ಮಾಡಲಯ್ಯಾ । ಯನ್ನಯಮನ ನಿನ್ನ
ಧ್ಯಾನಸಲೊಲ್ಲದೂ ॥ ಪ ॥
ಶ್ರೀನಿವಾಸನದಯ । ಕಾಣುವೋಧ್ಯಾನ್ಯಂಗಿನ್ನು ।
ನೀನೇದಯಾಮಡೋ । ಗುರುರಾಘವೇಂದ್ರ ॥ ಅ. ಪ ॥

ಕೀರ್ತಿಸದೇ ನಿನ್ನ । ವ್ಯರ್ಥಚಿಂತೆಯಮಾಡಿ ।
ಪಾರ್ಥಸಾರಥಿ ಮಾರ್ಗ ಕ್ಹೊರ್ತಾದೆ ।

ನಾಮರ್ತೆ ನಿಜಸೌಖ್ಯವನು । ಬೆರ್ತೆ ಅನ್ಯರ ಸತಿಯಾ ।
ಸಾರ್ಥಕಾಗದೇ ಪೋಯಿತೆನ್ನ ಆಯು ॥ ೧ ॥

ಮಾಂಸದಾಸೆಗೆ ಮೀನು । ಹಿಂಸೆ ಪಡುತಿರುವಂತೆ ।
ಸಂಸಾರದಲಿ ಸಿಕ್ಕೇ । ಕಂಸಾರಿ ಪ್ರೀಯಾ ।
ಹಂಸರೊಂದಿತ ಎನ್ನ । ಸಂಶಯವ ಪರಿಹರಿಸಿ ।
ಸಂಶಾಂತ ಮತಿನೀಡೋ । ಸಂಶಯ ದೂರನೇ ॥ ೨ ॥

ಎಷ್ಟುಪೇಳಲಿ ಎನ್ನ । ದುಷ್ಟ ಕರ್ಮಗಳನ್ನು ।
ಜೇಷ್ಟದೂತನೆ ಎನ್ನ । ಕಷ್ಟ ಬಿಡಿಸೋ ।
ವೃಷ್ಟಿಸಖಪ್ರಿಯ ಮನ । ತೃಷ್ಟಗಳನೆಕಳೆದು ।
ಶ್ರೇಷ್ಟಾ ನರಹರಿ ಚರಣಾ । ಭೀಷ್ಟವ ನೀಡೋ ॥ ೩ ॥

## ೯.ಶ್ರೀರಾಘವೇಂದ್ರತೀರ್ಥರು.

ಕರುಣಿಸೊ ಶ್ರೀಗುರುರಾಜಾ ।
ಬರದ್ಯಾಕೆ ಯನ್ನೊಳು ದಯಾ ॥ ಪ ॥
ದಯ ಮಾಡೊ ಶ್ರೀಗುರುರಾಜಾ ।
ಹಯವದನನಿಗತಿ ಪ್ರೀಯ ॥ ಅ.ಪ ॥

ವಲಿಸಾದೆ ವಿದ್ಯಗಳನ್ನು । ಬಾಲತನದಿ ಬಹುಕಾಲ ಕಳೆದೆ ।
ಕುಲೀಲೆಗಳಲ್ಲಿ । ಛಲವ್ಯಾಕೆ ಯನ್ನೊಳು ಬಲ್ಲಿ ॥ ೧ ॥

ಜ್ಞಾನರಹಿತ ಪ್ರಾಯದಿ ನಾ । ಮಾನಾಪೇಕ್ಷೆಯನೆ ಮಾಡಿ ।
ಮೌನಿವೇಷವನೇಧರಿಸಿ । ಹೀನಾಚರಣೆಯಲ್ಲಿರುವೆ ॥ ೨ ॥

ಪತಿತಾಗ್ರಣಿಯು ನಾ ಬಲ್ಲಿ । ಪತಿತಾ ಪಾವನನೀ ಬಲ್ಲೇ ।
ಗತಿಪ್ರದ ಮತಿಯನಿತ್ತು । ರತಿಪತಿಪಿತನ ತೋರಿ ॥ ೩ ॥

ಬಲ್ಲವರನು ರಕ್ಷಿಪುದೂ । ಅಲ್ಲಬಿರುದು ಘನವಾದ್ದು ।
ಅಲ್ಪಾನೆಪೊರೆಯಲು ನಿನಗೆ। ಒಳ್ಳೆ ಕೀರುತಿ ಬರುವೊದು ॥ ೪ ॥

ಸರ್ವಜ್ಞ ನಿನಗೆ ನಾನೆಂತೋ । ವೊರ್ವೀಭಾರನು ನಾಪೇಳ್ವೆ ।
ಪರ್ವಪಂಚಕಗಳ ಕಳೆ । ಶ್ರೀ ನರಹರಿಯನೆ ಪೊಂದಿಸಿ ॥ ೫ ॥

## ೧೦.ಶ್ರೀಬ್ರಹ್ಮಣ್ಯತೀರ್ಥರು.

ಅಂಜಿಸೋದ್ಯಾತಕಯ್ಯಾ । ಬ್ರಹ್ಮಣ್ಯಗುರು ॥ ಪ ॥
ಅಂಜಿಸೋದ್ಯಾಕಘ । ಭಂಜಕ ನೆನಿಸಿ ನೀ ।
ಕಂಜನಾಭನ ಭಕ್ತಿ । ಪಂಜರದೊಳಿಡದೇ ॥ ಅ.ಪ ॥

ಹೊಂದೀನರಜನ್ಮವ । ಇಂದಿರೇಶನು ಎಲ್ಲಾ ।
ಹೊಂದೀಹೊದರಿಯದ । ಮಂದಮತೀಯನು ॥ ೧ ॥

ಬಿಂಬಾ ಮಾಡಲು ಪ್ರತಿ । ಬಿಂಬಾ ಮಾಡುವುದೆಂದು ।
ಶಂಬರಾರಿಯ ಪಿತನ । ನಂಬದ ಢಂಬಿಯೊಳಂ ।
ಜಿಸೋದ್ಯಾತಕಯ್ಯಾ ॥ ೨ ॥

ಶ್ರೀನರಹರಿಪಾದ । ಧ್ಯಾನ(ವ) ಮಾಡದೇ ।
ಬುದ್ಧೀಹೀನನಾದವಗೆ । ಸುಜ್ಞಾನ ಕೊಡದೆ ಸುಮ್ಮನಂ –
ಜಿಸೋದ್ಯಾತಕಯ್ಯಾ ॥ ೩ ॥

## ೧೧.ಶ್ರೀ ಬ್ರಹ್ಮಣ್ಯತೀರ್ಥರು.

ತಪ್ಪೇನು ಮಾಡಿದೆನೋ । ಬ್ರಹ್ಮಣ್ಯಗುರು ॥ ಪ ॥
ಅಪ್ಪಾನಿನ್ನಯಮನಕೊಪ್ಪದೇ । ಇಪ್ಪಂಥ ॥ ಅ.ಪ ॥

ತಂದೇತಾಯಿಯೌ ನೀನೇ । ಬಂಧುಬಳಗ ನೀನೇ ।
ಸಂದೇಹವಿಲ್ಲವೋ । ಕಂದನೆಂದೆನ್ನದಂಥ ॥ ೧ ॥

ಒಂದೂ ತಿಳಿಯದಂಥ । ಮಂದಮತಿಯುನಾನು ।
ಛಂದದಿಂದಲಿ ಬುದ್ಧಿ । ಮುಂದೇ ಹೇಳಾದಂಥ ॥ ೨ ॥

ಸಂದೇಹ ಕಳೆದೆನ್ನ । ಬಂಧಾವಾಗಿಹ ಅಘ ।
ವೃಂದ ಕ್ಷಮಿಸಿ ಬೇಗ । ಮುಂದೆ ಕರೆಯದಂಥ ॥ ೩ ॥

ದುರುಳರೆಲ್ಲರು ಸೇರಿ । ಮರುಳುಗೊಳಿಸಿ ಯನ್ನ ।
ಕರುಣಾಸಾಗರನಿನ್ನ । ಕರುಣಾ ಪಡೆಯದಂಥ ॥ ೪ ॥

ಶಾಂತಾ ಶ್ರೀನರಹರಿ । ಪಂಥಾದಿಚರಿಸದೇ ।

ಭ್ರಾಂತನಾದೆ ಭವ । ಕಾಂತಾರ ದಾಟಿಸದಂಥ ॥ ೫ ॥

### ೧೨.ಶ್ರೀಬ್ರಹ್ಮಣ್ಯತೀರ್ಥರು.

ಕರವ ಪಿಡಿಯೋ ಬ್ರಹ್ಮಣ್ಯಾ । ಗುರುವೇ ॥
ಕರವಪಿಡಿಯೋಮುನ್ನ । ದುರಿತ ನೋಡದಲೆನ್ನ ।
ಪರಮ ನಿರ್ಮಲ ಜ್ಞಾನ । ತ್ವರಿತದಿಂದಿತ್ತೆನ್ನ ॥ ಪ ॥

ದೂರದೂರದಲಿದ್ದ । ನರರು ನಿಮ್ಮಯ ಚರಣ ।
ಸೇರಿಸೇವೆಯ ಮಾಡೆ । ಕರುಣಾದಿ ಕಾಯ್ವೆ ನೀ ॥ ೧ ॥

ದಿಟ್ಟತನದಿ ಭಕ್ತಿ । ಇಟ್ಟು ಸೇವಿಸಲಾಗ ।
ಕುಷ್ಠಾದಿ ರೋಗಗ । ಳಟ್ಟುವೀ ಬೇಗನೇ ॥ ೨ ॥

ಪರಿ ಪರಿ ಭವದೊಳು । ತಿರುಗಿಸದೆ ಎನ್ನ ।
ನರಹರಿ ಚರಣದ । ಸ್ಮರಣೆಯನ್ನೆ ಇತ್ತು ॥ ೩ ॥

### ೧೩.ಶ್ರೀಜಯತೀರ್ಥರು

ಪಾಲಿಸು । ಗುರುವರ್ಯ । ಜಯಾರ್ಯ ॥ ಪ ॥

ಶ್ರೀಮದಾನಂದ ತೀರ್ಥರ ಕಂದ ।
ಶ್ರೀಮದಕ್ಷೋಭ್ಯರ ಕಂದ । ಯತೀಂದ್ರ ॥ ೧ ॥

ಪೂರ್ಣಬೋಧ । ತೀರ್ಥಾರ್ಣವಿಹಾರೀ ।
ಸ್ವರ್ಣ ಪಾತ್ರ ಸುಧಾಕಾರೀ । ಉದಾರಿ ॥ ೨ ॥

ಶ್ರೀನರಹರಿ । ಧ್ಯಾನವಿಚಾರೀ ।
ಮೌನಿ ಗುಣಗಣ ಧಾರಿ । ಉದ್ಧಾರಿ ॥ ೩ ॥

### ೧೪.ಶ್ರೀಮಧ್ವಮತದ ಹಿರಿಮೆ.

ಮತವೆಂದರೇ ಮಧ್ವ । ಮತವೇ ಮತವು ।
ಶೃತಿಸ್ಮೃತೀತತಿಗೆ । ಸಮ್ಮತವಾದುದರಿಂದ ॥ ಅ.ಪ ॥

ಮಧುವೆಂದರಾನಂದ । ಒದಗಿಬರುವದು ಸತ್ಯ ।
ಮಧುವೈರಿ ಒಲಿದು । ಪಾದವತೋರುವ ।
ಸದಮಲ ಭಾವದಲಿ । ಮೇದಿನಿಯೊಳಗಿನ್ನು ।
ಮದಮತ್ಸರಿಲ್ಲದೆಲೆ । ಮುದದಿ ಯೋಚಿಸಲಾಗಿ ॥ ೧ ॥

ವ ವರ್ಣವೆಂದರೆ । ಶ್ರೀವರನ ಜ್ಞಾನವು ।
ಪವನಪಿತ ತಾ ಒಲಿದು। ಈವನದನು ॥
ಹೇಮವಿಲ್ಲದೆ ಶುದ್ಧ । ಭಾವದಿಂದಾಚರಿಸೆ ।
ಭವದೂರಗೈಸಿ । ಪಾವನಮಾಳ್ಪದದರಿಂದ ॥ ೨ ॥

ಮತವೆಂದರೇ ನಮ್ಮ । ರತಿಪತಿ ಪಿತ ಭಾವ ।
ಸತತ ಸಮ್ಮತಿಯಿತ್ತು । ಖತಿಯಳಿವದೈ ॥
ಕ್ಷಿತಿಯೊಳಗೆ ಪಿತ ಶ್ರೀನರಹರಿಯ ಪದಪದುಮ ।
ಅತಿ ತೀವ್ರದಲಿ ತೋರಿ । ಖ್ಯಾತಿತಂದೀವುದಕೆ ॥ ೩ ॥

## ೧೫.ಶ್ರೀ ಗಣಪತಿ

ಕರುಣೀಸೋ । ಗೌರೀಕರಜ ॥ ಪ ॥
ಕರುಣಾಳು । ಕ್ಷಿಪ್ರ । ಮಾನದಾ ।
ತರುಣಾರ್ಕ । ವಸನ । ಕಾಯ ಬೇಗದಿ ॥ ಅ.ಪ ॥

ಅರಿಪಾಣಿ ಕಾಯ ಜಾತಾ । ಅರಿವರ್ಗಗಳಿಗೆ ವಿಘ್ನವ ।
ತ್ವರದಲ್ಲಿ ಇತ್ತುಶುಭಕೆ ಮಾರ್ಗವ ॥ ೧ ॥

ನರಭಾವದಿಂದ ನಿನ್ನಾ । ಮರೆತಾರೆ ನೀನು ಯನ್ನನು ।
ಜರಿದಾರೆ ಪೊರೆವೊರ್‍ಯಾರೊ । ನಿರುತದಿ ॥ ೨ ॥

ಮರುದಂಶ ಮಧ್ವಮುನಿಯಾ ।
ವರಶಾಸ್ತ್ರ ಪೇಳ್ವ ಬುದ್ಧಿಯ ।
ವರವಿತ್ತು ಬಂದ ವಿಘ್ನವ ಕಳೆಯುತ ॥ ೩ ॥

ವರಪಾಶಪಾಣಿ ಎನ್ನಾ । ದುರಿತಾಶಪಾಶಾ ಛೇದಿಸಿ ।
ಹರಿಭಕ್ತಿಪಾಶದಿಂದ ಬಿಗಿಯುತ ॥ ೪ ॥

ಕರಿವಕ್ತ್ರಶಂಕೆ ಎಂಬ । ಕರಿಯನ್ನು ಅಂಕುಶಾದಲಿ ।
ಮುರಿಬಿಂಕ ಶಂಕಿಸಾದೆ ವಿದ್ಯವ ॥ ೫ ॥

ಮುರವೈರಿ ವಾಯು ಶಂಭೂ । ಶಿರಿವಾಣಿ ಚಂಡಿಕಾದ್ಯರು ।
ನಿರುತಾದಿ ಇದ್ದು ವರವ ಬೀರ್ವರು ॥ ೬ ॥

ನರವಾಹ ವಾಯುಜರಿಗೇ । ಸರಿ ಎಂಬೋಜ್ಞಾನದೀ ।
ಶ್ರೀನರಹರಿಪಾದ ತೋರಿ ಬೇಗನೆ ॥ ೭ ॥

## ೧೬.ಶ್ರೀಪಾರ್ವತೀದೇವಿಯವರು.

ಬೀರೇ ಸನ್ಮತಿಯಾ । ಪಾರ್ವತೀ ಬೀರೇ । ಸನ್ಮತಿಯಾ ॥ ಪ ॥

ಘೋರನಲ್ಲಪಾರ ದೋಷ । ದೂರಗೈಯುತ ಮಾರನೈಯ್ಯನ ।
ಚಾರುಮೂರುತಿ ತೋರಿನಿರುತ । ಸಾರಸಾಕ್ಷೀಗಾರು ಮಾಡದೆ ॥ ೧ ॥

ಕ್ಷೋಣಿಯಲ್ಲಿ ಪ್ರಾಣಮತವ । ಜ್ಞಾನದಿಂದಲಿ ಗಾನಮಾಡುವ ।
ದಾನವಿತ್ತು ಸಾನುರಾಗದಿ । ದಾನವಂತಕ ಕಾಣುವಂತೆ ॥ ೨ ॥

ಕಾಮಹರನ ವಾಮಭಾಗದಿ । ಪ್ರೇಮದೀರುವ ಭಾಮಾಮಣಿಯೆ ।
ಕಾಮಮಾರ್ಗವ ಧಾಮಕೆಡಹಿ । ಶ್ರೀನರಹರಿ ನಾಮಸುಖವ ॥ ೩ ॥

## ೧೭. ಶ್ರೀಮಹಾರುದ್ರದೇವರು .

ಬೇಡಿಕೊಂಬೆ । ಮೃಡಹರ ಭವ । ಶಂಭೋ ॥ ಪ ॥
ಬೇಡಿಕೊಂಬೆ । ನಿನ್ನಡಿಗಳಿಗೆರಗಿ ನಾ ।
ಕಡಲಕುವರಿಯ ಒಡೆಯನಲಿ ಮನ ॥ ಅ.ಪ ॥

ಮನಕಾರಣವಲ್ಲವೊ ಅನಲಾಕ್ಷನೇ ।
ಹೀನಸುಕರ್ಮಕೆ ಪ್ರೇರಣೆ ಹೊರತು ॥ ೧ ॥

ಮೃತ್ಯುಂಜಯ ಮುಪ್ಪುರಹರ ದೇವನೆ ।
ಅತ್ಯಪರಾಧ ಗಳೆತ್ತೆಣಿಸದಿರ್ವೈ ॥ ೨ ॥

ಶ್ರೀನರಹರಿಯಾ ತನಯ ಕುವರನೇ ।

ಅನುದಿನದಲಿ ಮನ ದೋಷಗಳಳಿಯೈ ॥ ೩ ॥

## ೧೮.ಶ್ರೀಭಾರತೀದೇವಿಯರು

ನಿರುತದಿ ಭಜಿಪೆನಾ । ಭರತನ ರಾಣಿಯೇ ॥ ಭಾರತೀಯೆ ॥ ಪ ॥
ಗುರುವರಂತರ್ಗತ । ಹರಿಭಕ್ತಿ ಪಾಲಿಸೇ ॥ ಭಾರತಿಯೇ ॥ ಅ.ಪ ॥

ಕಾವೋದು ಬಾಲನ । ಸೇವೆ ನೀಕರಿಸದೆ । ಭಾರತಿಯೇ ॥
ಶಿವಮುಖ ಸುರ ಸಂಸ್ತವಕೆ । ಸುಪ್ರೀತಳೆ । ಭಾರತಿಯೇ ॥ ೧ ॥

ಕಾಳೀದ್ರೌಪದಿಶಿವಕನ್ಯಾ । ಳೆಂದೆನಿಸಿದಿ । ಭಾರತಿಯೇ ॥
ನಳ ನಂದಿನಿ ಮನ ಕೊಳೆಯ । ತೊಳೆಯಬೇಕೇ । ಭಾರತಿಯೇ ॥ ೨ ॥

ಒಂದಿಪೆ  ನಿನಗಿಂದ್ರಶೇನ । ಳೆಂದೆನಿಸಿದಿ । ಭಾರತಿಯೇ ॥
ಕಂದನ ಕುಂದುಗ । ಳೊಂದೆಣಿಸದೆ ಕಾಯೇ । ಭಾರತಿಯೇ ॥ ೩ ॥

ಕಾಲಾಭಿಮಾನಿಯೆ । ಶೈಲಜೆ ಶ್ಯಾಮಲ । ಭಾರತಿಯೇ ॥
ಪೋಲೋಮಿ ಉಷರಿಂದ । ವಾಲಗ ಕೈಕೊಂಬೆ । ಭಾರತಿಯೇ ॥ ೪ ॥

ಹರಿಯ ಹಿರಿಯ ಸೊಸಿ । ಪರಮ ಪದಕೆ ಬರುವಿ । ಭಾರತಿಯೇ ॥
ಕರುಣಾದಿ ಭಾರತಾದ್ಯರ್ಥ । ವರುಹೆ ನಿತ್ಯಾ । ಭಾರತಿಯೇ ॥ ೫ ॥

ಸನಕಾದಿ ಯೋಗಿ । ವಿನುತ ಚರಣಳೆ ಯನ್ನ । ಭಾರತಿಯೇ ॥
ಹೀನಬುದ್ಧಿಯ ಕಳಿ । ಜ್ಞಾನಮಾರ್ಗವ ತೋರೆ । ಭಾರತಿಯೇ ॥ ೬ ॥

ಮಾನಾಭಿಮಾನ । ನಿನ್ನಾಧೀನ ಎನಗೆ ನೀ । ಭಾರತಿಯೇ ॥
ಶ್ರೀ ನರಹರಿ ಪಾದ । ಮನದಿ ತೋರಿಸೇ ನಿತ್ಯಾ । ಭಾರತಿಯೇ ॥ ೭ ॥

## ೧೯.ಶ್ರೀಸರಸ್ವತೀ ದೇವಿಯರು.

ದೇವಿ ಸರಸ್ವತಿ ನಿತ್ಯ । ಕಾವುದೆಮ್ಮನು ॥ ಪ ॥
ದೇವೀ ಸರಸ್ವತಿ ನಿತ್ಯ । ಸೇವಿಪ ಮನುಜರಘ ।
ಪಾವಿತರನ್ನಮಾಡುವೀ । ನೋವಕೊಡದೆಲೆ ಕಾಯೇ ॥ ಅ.ಪ ॥

ಪದ್ಮನಾಭನ ನಾಭಿ ಪದ್ಮಜನನ ಸಹ ಹೃ– ।

ತ್ಪದ್ಮದೊಳಗೆ ನೆಲಸಿ । ಛದ್ಮವ ಕಳೆಯೆ ನಿರುತ ॥ ೧ ॥

ಮಾರರಮಣನ ದಿವ್ಯ । ಚರಣ ಸರೋಜವ ।
ತೋರಿ ಕರುಣವ ಮಾಡೆ । ವಾರಿಜಾಸನನ ರಾಣಿ ॥ ೨ ॥

ಲಕುಮೀ ನಾರಾಯಣನ । ಸುಕುಮಾರ ಚತುರ್ಮುಖ ।
ನ್ವಾಕಿಗಾಗಿ ಬ್ರಾಹ್ಮಿ ಎನಿಸಿ । ಸಾಕುವಿ ಲೋಕವ ಕಾಯೆ ॥ ೩ ॥

ಮಾಯಪತಿ ವಾಸುದೇವ । ಕಾಯಜ ಕಾಲಪುರುಷರ್ಗೆ ।
ಗಾಯತ್ರಿ ಸಾವಿತ್ರಿ ಯಾಗಿ । ತೋಯಜಸನ ವಿಹಾರೀ ॥ ೪ ॥

ಶಂಕರ ಸನ್ನುತ ಜಯಾ । ಸಂಕರುಷಣನ್ನ ಪಾದ ।
ಕಿಂಕರನ್ನ ಮಾಡಿ ಎನ್ನ । ಸಂಕಟ ಪರಿಹಾರ ಮಾಡೆ ॥ ೫ ॥

ಕೃತಿಪತಿ ಅನಿರುದ್ಧ । ನಾಂತುದಿಸಿದ ವಿರಿಂಚಿ ।
ಕಾಂತೆ ದುರಿತ ತರಿದು । ಶಾಂತ ಮನಸನು ಕೊಡೆ ॥ ೬ ॥

ವಾಣಿ ವೀಣಾಪಾಣಿಯೇ । ಕಾಣಿಸನುದಿನವೆನಗೆ ।
ಫಣಿ ಮೃಡವೇಂದ್ರಮುಖ । ಗಣಾರಾಧಿತಳೇ ತಾಯೆ ॥ ೮ ॥

ಹೀನ ಗುಣವೆಣಿಸದೆ । ಜ್ಞಾನಭಕ್ತಿ ವೈರಾಗ್ಯವ ।
ಸಾನುರಾಗದಲಿ ಇತ್ತು । ಶ್ರೀನರಹರಿಯೆ ತೋರೆ ॥ ೯ ॥

## ೨೦.ಭಾವೀಸಮೀರ ಶ್ರೀವಾದಿರಾಜತೀರ್ಥರು.

ಗುರುರಾಜರ ನಂಬಿರೋ । ಸಾರುವೆ ನಾ ।
ಸಾರುವೆ ನಾ । ಸಾರುವೆ ನಾ ॥ ಪ ॥
ಗುರುವಾದಿರಾಜರ । ಚರಣ ಸ್ಮರಣೆಯಿಂದ ।
ದುರಿತ ರಾಶಿಗಳೆಲ್ಲ । ಪರಿಹಾರವಾಗುವುದು ॥ ಅ.ಪ ॥

ಕರುಣಾಸಾಗರರಿವರೂ । ಸ್ಮರಿಪರಘ ಸ್ಮರಿಸದೇ ।
ಪರತತ್ವವ ವರಿದು ।
ಬಾರೀಬಾರಿಗೊದಗಿದಪಾರ ಸಂಶಯ ।
ದೂರಗೈಸಿ ಮುರಾರಿ ಚರಣವ ತೋರ್ಪ
ಸುರರಿಗೆ ಮರುತರೆನಿಪರು ಬರುವಕಲ್ಪಕೆ ॥ ೧ ॥

ಗುರುವಾದಿರಾಜರೇಂಬ ಸುರತರು ।
ಇರುವ್ಹೋದು ಸೋದಾಪುರದಿ ।
ಅರಿತು ನಿರುತದಿ ಪರಮ ಭಕುತಿಲಿ ।
ಸೇರಿಸೇವೆಯ ಮಾಳ್ಪ ಸುಜನಕೆ ।
ಬೀರುವರು ಪುರುಷಾರ್ಥಗಳನು ।
ಪಾರುಗಾಣರು ಸುರರು ಮಹಿಮೆಯ ॥ ೨ ॥

ಉಪಚಾರವಲ್ಲವಿದು ಶ್ರೀಪತಿಯಾಣೆ ।
ಗುಪಿತದಿಂದವರಮಂತ್ರ ।
ಜಪಿಸಿ ಭೂತರಾಜರೆಂಬೊರು ।
ತಾಪಹಾರಕರಾಗಿ ಸುಜನಕೆ ।
ತಪವ ಮಾಳ್ಪರು ರುದ್ರ ಪದವಿಗೆ ।
ಶ್ರೀನರಾಹರಿ ಪಾದ ಇವರಲಿ ॥ ೩ ॥

## ೨೧.ಶ್ರೀಮುಖ್ಯಪ್ರಾಣದೇವರು.

ನಿನ್ನ ನಂಬೀಬಂದೆ । ಪಂಚಮುಖಿ ಪ್ರಾಣ ।
ಅನ್ಯ ಹಂಬಲ ಬಿಡಿಸಿ । ಬಿಂಬ ಮೂರುತಿ ತೋರೋ ॥ ಪ ॥

ಹಿಂದೆ ತ್ರೇತಾಯುಗದಿ । ರಾಮನಾಜ್ಞೆಯ ಹೊಂದಿ ।
ಸಿಂಧುದಾಟೀ ಸೀತೆಗೆರಗಿ ನಿಂದು ॥
ಸುಂದರ ರಾಮ ಮುದ್ರಿಕೆ ಇತ್ತು । ಲೀಲೆಯಲಿ ।
ಕೊಂದು ರಕ್ಕಸ ಪುರವನನಲಗೆ ಇತ್ತೆ ॥ ೧ ॥

ಭಂಡಿ ಅನ್ನವನುಂಡು । ಭಂಡ ಬಕನಾಕೊಂದು ।
ಹಿಂಡುನೃಪರಾ ಜರಿದು । ಕೊಂಡುದ್ರೌಪದಿಯಾ ॥
ಮಂದ ಮತಿಗಳನಳಿದು । ತಂದಿ ಸೌಗಂಧಿಕವ ।
ಪುಂಡ ಕೀಚಕ ರಳಿದ । ಪಾಂಡವರ ಪ್ರಿಯ ದೂತ ॥ ೨ ॥

ಮೋದತೀರ್ಥರೆನಿಸಿ । ವಾದಿಗಳ ನಿಗ್ರಹಿಸಿ ।
ಬೋಧಿಸೀ ಸುಜನರಿಗೆ । ಮಾಧವನ ಗುಣವಾ ॥
ಸಾಧುವಂದಿತ ಬಾದ । ರಾಯಣರು ಇರುತಿರುವ ।
ಬದರಿಯಲ್ಲಿರುವಿ । ಶ್ರೀನರಹರಿಯ ತೋರೋ ॥ ೩ ॥

## ೨೨.ಶ್ರೀಲಕ್ಷ್ಮೀದೇವಿಯರು.

ಅಮ್ಮಾಲಕುಮೀದೇವೀ । ನಿಮ್ಮರಸನ ತೋರೆ ।
ಸುಮ್ಮನೆ ಬಿಡುವದು । ಸಮ್ಮತವೇ ನಿನಗೇ ॥ ಪ ॥

ಹೆತ್ತ ಬಾಲರು ಮಂದ । ಮತಿಗಳಾದರೆ ತಾಯಿ ।
ಸತ್ತುಹೋಗಲಿ ಎಂದು । ಎತ್ತದೆ ಬಿಡುವೊಳೆ ॥ ೧ ॥

ನಿಮ್ಮ ಮಾತಿಗೆ ಹರಿ । ಸಮ್ಮತನಾಗುವ ।
ಕುಮತಿಗಳೆಣಿಸದೆ । ರಾಮ ಮೂರುತಿ ತೋರೆ ॥ ೨ ॥

ಸಿಂಧು ತನಯೆ ಎನ್ನ } ಬಂಧ ಬಿಡಿಸಿ ಬೇಗ ।
ನಂದ ಕಂದನ ಪಾದ । ಪೊಂದಿರುವಂತೆ ಮಾಡೆ ॥ ೩ ॥

ತತ್ವೇಶರೆಲ್ಲರೂ । ನಿತ್ಯಾಧೀನರು ನಿಮಗೆ ।
ಭೃತ್ಯಗೆ ನಿಜ ಹರಿ । ಭಕ್ತಿಕೊಡುವಂತೆ ಪೇಳೆ ॥ ೪ ॥

ಎನ್ನಲ್ಲಿರುತಿರುವ । ಹೀನ ರೋಡಿಸಿ ಬೇಗ ।
ಪನ್ನಗಾಚಲ ವಾಸ । ಶ್ರೀನರಹರೀ ತೋರೇ ॥ ೫ ॥

## ೨೩. ಶ್ರೀಹಯವದನದೇವರು.

ಜಲಜಾಕ್ಷಯಾಚಿಸುವೆ । ಚಲುವಚರಣವ ತೋರೋ ॥
ಶುಲಭದಿ ಹಯವದನ ॥ ಪ ॥

ಶಶಿಯೊಳಿರುವಿದರ ಅ । ಕ್ಷಸುಬೋಧ ಪುಸ್ತಕದಾರ ।
ವಸುಮತಿರಮಣನೆ ನಿನ್ನ । ಸಾಸಿರ ನಾಮದಲಿ ಸೋಸಿಲಿ
ನಾಪ್ರಾರ್ಥಿಸುವೆ ॥ ೧ ॥

ವರವಾದಿ ಜಯದ । ವಿಮುಕ್ತಿಪ್ರದಾತ ಕಾಂತಿ ಸುಬುದ್ಧಿ ।
ಸ್ಥಿರದನೆ ಅನುದಿನ ನಿನ್ನ । ಆರೆರಡು ಅಕ್ಷರದ ಮಂತ್ರವನೂ
ಪ್ರೇಮದಿ ನಾ ॥ ೨ ॥

ಮುಖದೊಳ್ ಸಕಲಾಗಮ ವಿದ್ಯಾ । ಸುಘೋಷಮಾಡಿ ಕಮಲಾ
ಆಕಮಲಜ ಭವಮುಖರಿಂದ । ಅಮೃತದಲಿ ಸ್ತುತಿಸಿಹ ಭೀಷಿಕ್ತನೇ

ನೀ । ನೆನಿಶಿ ನರಹರೆ ॥ ೩ ॥

## ೨೪.ಶ್ರೀನರಸಿಂಹದೇವರು.

ಏನಿದು ರೂಪ । ಶ್ರೀನರಹರೆ ॥ ಪ ॥
ಏನಿದು ರೂಪವೋ ಮನಸಿಜನೈಯನೇ ।
ನೆನೆಸಿದವರ ಹೃದ್ವನಜದೊಳ್ ಮೆರೆವುದೂ ॥ ಅ.ಪ ॥

ಮಾರನ ಪಿತನೆಂದು । ಕರೆಸಿ ಕೊಂಬುವನಿಗೆ ।
ಮೋರೆಯೋಳ್ ಮೂರು । ಕಣ್ಣುಗಳ ಧರಿಸಿರುವುದು ॥ ೧ ॥

ಪರಮ ಶಾಂತಾನೆಂದು । ಮೆರೆಯುವಿ ಶೃತಿಯೊಳು ।
ಕ್ರೂರ ರೂಪಾದಿಂದ । ನರರಿಗೆ ತೋರ್ಪದೂ ॥ ೨ ॥

ವರವೈಜಯಂತಿಯಾ । ಕೊರಳೊಳ್ ಧರಿಸೂವಗೆ ।
ಕರುಳ ಹಾರವ ಧರಿಸಿ । ವರ ಶಬ್ದ ಮಾಳ್ಪೊದು ॥ ೩ ॥

ನಾನೇ ದೇವರು ಮತ್ತೂ । ಅನ್ಯರಿಲ್ಲೆಂಬುವ ।
ಕನಕ ಕಶ್ಯಪ ಮುಖ್ಯ । ದನುಜರಸೀಳ್ವುದು ॥ ೪ ॥

ತರಳ ಕರದಾಕ್ಷಣದೀ । ವರವೈಕುಂಠವ ಬಿಟ್ಟು ।
ನರಹರಿ ಎನಿಸೀ ನೀ । ಭರದಿ ಬಂದಿರುವುದು ॥ ೫ ॥

## ೨೫.ಶ್ರೀ ನರಹರಿಯಲ್ಲಿ ಬಿನ್ನಹ.

ನಿನಗೆ ನಾ ಬ್ಯಾಡಾದನೆ । ಘನಕೃಷ್ಣ ।
ಮಾನಿನಿಯ ಕಿಂತ ಕೊನೆಯೆ ॥ ಪ ॥

ಯನ್ನ ಕಣ್ಣಿಗೆ ತೋರದೆ । ಬೆನ್ನಲ್ಲಿ । ಮಾನಿನಿಗೆ ನೀ ತೋರಿದ್ಯಾ ॥

ಮನ್ನಿಸುವೆ ನಿತ್ಯದಲ್ಲಿ । ಮುನ್ನನಿನಗೆ । ನಾ ದ್ವೇಷಿಯಲ್ಲವೋ ॥ ೧ ॥

ಒಳಗೆ ನೀನಿರುವಿ ಎಂದೂ । ತಿಳಿದು । ಬಲು ತೊಳಲಿ ಶರಣು ಬಂದರೆ ॥

ಪೊಳೆಯದೆಲೆ ಮನಸಿನೊಳಗೆ । ಕೊಳಲು । ಕರೆ ಬಾಲೇಗೆ ನೀ ತೋರಿದ್ಯಾ ॥ ೨ ॥

ಸುಳ್ಳು ಇದು ಎಂದ್ಹೇಳಲು । ಸಲ್ಲದೆಲೊ । ಕಳ್ಳನೀನೆಂದು ಬಲ್ಲೆ ।
ಪುಲ್ಲನಾಭನೆ ತೋರೆಲೊ । ಮೆಲ್ಲನೇ । ಗಲ್ಲ ಪಿಡಿದು ಮುದ್ದಿಪೆ ॥ ೩ ॥

ನೀರದಸಮ ಕಾಂತಿಯಾ । ನಾರಿಮಣಿ । ಬೀರಿದಳೊ ಶ್ರೀಕೃಷ್ಣನೆ ॥
ಕರುಣಸಾಗರನೆಂಬೊದು । ಮರತು । ನೀದೂರ್ಹೋಗಿನಿಲ್ವರೇನೊ ॥ ೪ ॥

ಮೂರು ವಯಸೆಂದ್ಹೇಳರೋ । ಚಾರುತರಾ ಭರಣ ಇಟ್ಟಹನೆಂಬುರೊ ॥
ಈ ರೀತಿ ಅಬಲೆಯಾರು । (ಧರೆಯೊಳಗೆ) । ನಿರುತದಲಿ ದರೆಯೊಳಗೆ ಪೇಳ್ವದರಿಯಾ ॥ ೫ ॥

ಎಂದಿಗಾದರು ನಿನ್ನನು । ಪೊಂದದೆಲೆ । ಇಂದಿರಾಧವ ಬಿಡುವೆನೆ ॥
ತಂದೆ ಶ್ರೀಮಧ್ವರಾಯ । ಛಂದದಲಿ । ಮುಂದೆ ತಂದೆಳೆವ ನಿನ್ನ ॥ ೬ ॥

ನೀ ಬಿಟ್ಟರೇ ಕೆಡುವೆನೆ । ಶ್ರೀಭೀಮನೊಬ್ಬನ ಬಲ ಸಾಕೆಲೋ ॥
ಆಪಾರ ದೈವ ನಿನ್ನ । ಕೊಬ್ಬುತ । ತಬ್ಬಿನಾ ನಿನ್ನೊಲಿಸುವೆ ॥ ೭ ॥

ಮಾನದಿಂದಲಿ ತೋರೆಲೊ । ನಿನಗಿದು । ಘನತೆಯಲ್ಲವೋ ॥
ಜೀಯನೆ ಎನ್ನಪಿತ ಹನುಮರಾಯ । ನಿನ್ನಲ್ಲಿ ।
ಮುನ್ನಮಾಡ್ದುಪಕೃತಿ(ಯನೂ) ಮರೆತೆಯಾ ॥ ೮ ॥

ಇನಿತು ವಂಚಿಸಿ ಪೋದರೆ । ನಾನಿನ್ನ । ಹೀನ ಗುಣದವನೆನ್ನುವೆ ।
ಮನ್ನಿಸೀ ಸಲಹೋ ಬ್ಯಾಗ । ಶ್ರೀನರಹರಿಯೆ ನಾ ಭಿನ್ನೈಸುವೆ ॥ ೯ ॥

॥ ಶ್ರೀ ಪ್ರದ್ಯುಮ್ನತೀರ್ಥರಂತರ್ಗತ ಶ್ರೀವಾದಿರಾಜಗುರ್ವಂತರ್ಗತ
ಶ್ರೀಹಯಗ್ರೀವಾಭಿನ್ನಮಧ್ವೇಶಾರ್ಪಣಮಸ್ತು ॥

ಅಕ್ಷರ ಸಂಯೋಜನೆ ಸೇವಾ
ಕೆಂಪದಾಳೀ ಹರೀಶ್
ಬೆಂಗಳೂರು